3) ಈ ಸಂಸ್ಥೆಯ ಆಡಳಿತವು 1977ರ ಹಿಂದಿನಿಂದ ಮುಜರಾಯಿ ಇಲಾಖೆಗೆ ಒಳಪಟ್ಟಿದೆ.

4) ದಿ: 4-1-99ರಂದು ಕರ್ನಾಟಕ ರಾಜ್ಯ ವಕ್ಫ್ ಮಂಡಲಿಯು ತನ್ನ ಆದೇಶ ಸಂಖ್ಯೆ ಕೆಟಿಡಬ್ಲ್ಯೂ 4764 ಎಜಿಡಬ್ಲ್ಯೂ ಎಂಯುಎಫ್ 74 ರಲ್ಲಿ ತೀರ್ಥಹಳ್ಳಿ ತಾಲ್ಲೂಕಿನ ಹಂಗಾರಕಟ್ಟೆಯ ಶ್ರೀ ಸಯ್ಯದ್ ಸಾದತ್‌ಅಲಿ ದರ್ಗಾವನ್ನು ಅದರ ಚರ : ಸ್ಥಿರ ಆಸ್ತಿಗಳೊಂದಿಗೆ ವಕ್ಫ್ ಮಂಡಲಿ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಆದೇಶಿಸಿರುವುದು ನಿಜ. ಸದರಿ ಸಂಸ್ಥೆಯನ್ನು ವಕ್ಫ್ ಮಂಡಲಿ ವಹಿಸಿಕೊಳ್ಳಲು ನೀಡಿರುವ ಕಾರಣ ಈ ಕೆಳಕಂಡಂತೆ ಇದೆ.

ಸದರಿ ಸಂಸ್ಥೆಯ ಆಡಳಿತವನ್ನು ನೋಡಿಕೊಳ್ಳಲು ಆಡಳಿತ ಮಂಡಳಿ ಇಲ್ಲವೆಂದೂ ಶಿವಮೊಗ್ಗ ಜಿಲ್ಲಾ ವಕ್ಫ್ ಮಂಡಲಿಯ ಶಿಫಾರಸ್ಸಿನ ಮೇರೆಗೆ ವಕ್ಫ್ ಮಂಡಲಿಯೂ ಮೇಲ್ಕಂಡ ಆದೇಶ ಹೊರಡಿಸಿದೆ.

ಸದರಿ ಸಂಸ್ಥೆಯು ಮುಜರಾಯಿ ಇಲಾಖೆಗೆ ಸೇರಿದೆಯೆಂದು ವಕ್ಫ್ ಮಂಡಲಿಯ ಆದೇಶದ ವಿರುದ್ಧ ಕಂದಾಯ ಕಾರ್ಯದರ್ಶಿ-2, ಅವರ ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡಿ ಸದರಿ ನಾಯ್ಯಾಲಯದ ಆದೇಶ ಕ್ರಮಾಂಕ ಕಂಇ 37 ಮುಆಪ್ರ 99, ದಿ: 3-2-99 ರಲ್ಲಿ ತಾತ್ಕಾಲಿಕ ತಡೆಯಾಜ್ಞೆ ನೀಡಿದೆ, ಹಾಗೂ ಅಂತಿಮ ತೀರ್ಮಾನಕ್ಕೆ ಬಾಕಿ ಇರುತ್ತದೆ.

ಆದುದರಿಂದ ಸದರಿ ಸಂಸ್ಥೆಯ ಆಡಳಿತವು ಇಂದಿಗೂ ಮುಜರಾಯಿ ಇಲಾಖೆಯ ವಶದಲ್ಲಿದ್ದು, ಅದರ ಆಡಳಿತವನ್ನು ಇಲಾಖಾ ವತಿಯಿಂದಲೇ ನಿರ್ವಹಿಸಲಾಗುತ್ತಿದೆ.

ಖಾಸಗಿ ಕಂಪನಿಗಳ ಹತ್ತಿ ಬೀಜ ಮಾರಾಟ.

1529(2154) ಶ್ರೀ ಉಜ್ಜಯ್ಯನೇಶ್ವರ ಬಸವನಪ್ಪ ಬಣಕಾರ್ (ಹಿರೇಕೆರೂರ್) :— ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಾರುಕಟ್ಟೆಯಲ್ಲಿ ಖಾಸಗಿ ಕಂಪನಿಗಳು ಹತ್ತಿ ಬೀಜವನ್ನು ಬಹಳ ಹೆಚ್ಚಿನ ದರದಲ್ಲಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮವೇನು?

ಆ) ಹತ್ತಿ ಬೀಜಗಳನ್ನು ಮಾರಾಟ ಮಾಡುತ್ತಿರುವ ಖಾಸಗಿ ಕಂಪನಿಗಳು ಯಾವುವು ಮತ್ತು ಯಾವ ದರದಲ್ಲಿ ದೂರುತ್ತಿದ್ದಾರೆ?

ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :—

ಅ) ಹೌದು

ಖಾಸಗಿ ಕಂಪನಿಗಳು ಹತ್ತಿ ಬೀಜದ ದರವನ್ನು ಆಯಾ ಸಂಸ್ಥೆಗಳು ನಿಗಧಿಪಡಿಸುತ್ತಾರೆ, ಸರ್ಕಾರಕ್ಕೆ ಖಾಸಗಿ ಕಂಪನಿಗಳು ನಿಗಧಿಪಡಿಸಿರುವ ಬೆಲೆಯ ಮೇಲೆ ಹತೋಟಿ ಇರುವುದಿಲ್ಲ.

ಅ) ರಾಜ್ಯದಲ್ಲಿ ಹತ್ತಿ ಬೀಜಗಳನ್ನು ಮಾರಾಟ ಮಾಡುತ್ತಿರುವ ಖಾಸಗಿ ಕಂಪನಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಖಾಸಗಿ ಸಂಸ್ಥೆಗಳು ಉತ್ಪಾದಿಸುತ್ತಿರುವ ವಿವಿಧ ಹತ್ತಿ ತಳಿಗಳಿಗೆ ಖಾಸಗಿ ಸಂಸ್ಥೆಗಳು ನಿಗಧಿ ಮಾಡಿ ಮಾರಾಟ ಮಾಡುತ್ತಿರುವ ಕನಿಷ್ಟ ಮತ್ತು ಗರಿಷ್ಠ ಬೆಲೆಗಳು ಈ ಕೆಳಕಂಡಂತಿದೆ.

<u>ಸಂಕರ ಹತ್ತಿ</u> :

1.	ಜಯಲಕ್ಷ್ಮಿ ಡಿ.ಸಿ.ಹೆಚ್.32	- ರೂ.450.00ರಿಂದ ರೂ. 600.00 (750 ಗ್ರಾಂನಿಂದ 1 ಕೆಜಿಯ ಪ್ರತಿ ಪೊಟ್ಟಣಕ್ಕೆ)
2.	ವರರಕ್ಷ್ಮಿ	- ರೂ.500.00 ರಿಂದ ರೂ.600.00 (750 ಗ್ರಾಂನಿಂದ 1 ಕೆಜಿಯ ಪ್ರತಿ ಪೊಟ್ಟಣಕ್ಕೆ)
3.	ಎನ್‌ಹೆಚ್‌ಹೆಚ್ - 44	ರೂ.450-00 ರಿಂದ ರೂ.500.00 (750 ಗ್ರಾಂನ ಪ್ರತಿ ಪೊಟ್ಟಣಕ್ಕೆ)
4.	ಇತರೆ ಸಂಕರ ಹತ್ತಿ-	ರೂ.480.00 ರಿಂದ ರೂ. 600.00 (450 ಗ್ರಾಂನಿಂದ 750 ಗ್ರಾಂನ ಪೊಟ್ಟಣಕ್ಕೆ)
5.	ಖಾಸಗಿ ಸಂಕರ ಹತ್ತಿ-	ರೂ.800.00 ರಿಂದ ರೂ.622.00 (750 ಗ್ರಾಂನ ಪ್ರತಿ ಪೊಟ್ಟಣಕ್ಕೆ)
ಹತ್ತಿ ತಳಿಗಳು-		ರೂ.150.00 ರಿಂದ ರೂ.175.00 (2 ಕೆ.ಜಿ.ಯ ಪ್ರತಿ ಪೊಟ್ಟಣಕ್ಕೆ)

ಅನುಬಂಧ

ರಾಜ್ಯದಲ್ಲಿ ಹತ್ತಿ ಬೀಜ ಮಾರಾಟ ಮಾಡುತ್ತಿರುವ ಖಾಸಗಿ ಸಂಸ್ಥೆಗಳು

1. ಮೆ: ಅಡ್ವೆಂಟ್ ಇಂಡಿಯಾ ಲಿ., ಬೆಂಗಳೂರು.
2. ಮೆ: ಬಿ.ಎನ್. ಅಮರೇಶ್ವರ ಸೀಡ್ಸ್, ಗಡವಾಲ ಎ.ಪಿ.
3. ಮೆ: ಟಿ.ಎನ್.ಆರ್. ಅಮರೇಶ್ವರ ಹೈಬ್ರಿಡ್ ಸೀಡ್ಸ್, ರಾಯಚೂರು.
4. ಮೆ: ಶ್ರೀ ಅಮರೇಶ್ವರ ಹೈಬ್ರಿಡ್ ಸೀಡ್ಸ್, ರಾಯಚೂರು.
5. ಮೆ: ಅಮರೇಶ್ವರ ಅಗ್ರಿಟೆಕ್ ಲಿ., ಹೈದರಾಬಾದ್.
6. ಮೆ: ಭಾರತ್ ಸೀಡ್ಸ್ಸ್., ಹೈದರಾಬಾದ್.
7. ಮೆ: ಭದ್ರ ಹೈಬ್ರಿಡ್ ಸೀಡ್ಸ್, ಕಂ. ದಾವಣಗೆರೆ.

8. ಮೆ: ಗೋದಾವರಿ ಸೀಡ್ಸ್, ಅಂಡ್ ಫಾಮ್, ವಾರಂಗಲ್.
9. ಮೆ: ಗಂಗಾ ಕಾವೇರಿ ಸೀಡ್ಸ್, ಪ್ರೈ. ಲಿ. ಹೈದರಾಬಾದ್.
10. ಮೆ: ಹಿಂದೂಸ್ಥಾನ್ ಲೀವರ್ ಲಿ. ಹೈದರಾಬಾದ್.
11. ಮೆ: ಇಂಡೋ ಅಮೇರಿಕನ್ ಹೈಬ್ರಿಡ್ ಸೀಡ್ಸ್, ಬೆಂಗಳೂರು.
12. ಮೆ: ಜಿ.ಕೆ. ಅಗ್ರಿ ಜನಟಿಕ್ಸ್ ಸಿಕಂದರಾಬಾದ್.
13. ಮೆ: ಕಾವೇರಿ ಸೀಡ್ಸ್, ಕಂಪನಿ ಲಿ. ದಾವಣಗೆರೆ.
14. ಮೆ: ಕಟ್ರಾ ಆಗ್ರೋ ಟೆಕ್ ಕಂ. ಬಳ್ಳಾರಿ.
15. ಮೆ: ಕರ್ನಾಟಕ ಸೀಡ್ಸ್ ಕಂಪನಿ, ಬೆಂಗಳೂರು.
16. ಮೆ: ಕರ್ನಾಟಕ ಹೈ-ಟೆಕ್ ಆಗ್ರೋ ಎಂಟರ್‌ಪ್ರೈಸಸ್, ರೋಣ.
17. ಮೆ: ಮಂಜುಶ್ರೀ ಪ್ಲಾಂಟೇಷನ್ಸ್ ಲಿ. ಬೆಂಗಳೂರು.
18. ಮೆ: ಮಹಾರಾಷ್ಟ್ರ ಹೈಬ್ರಿಡ್ ಸೀಡ್ಸ್ ಕಂ. ಲಿ., ಬೆಂಗಳೂರು.
19. ಮೆ: ಮಹೇಂದ್ರ ಹೈಬ್ರಿಡ್ ಸೀಡ್ಸ್, ಕಂ. ದಾವಣಗೆರೆ.
20. ಮೆ: ಮೌರ್ಯ ಅಗ್ರಿ-ಟೆಕ್, ಹೈದರಾಬಾದ್.
21. ಮೆ: ನಾವರ್ಟಿನ್ ಇಂಡಿಯಾ ಲಿ., ಮಣಿ.
22. ಮೆ: ನಾಗಾರ್ಜುನ ಫರ್ಟಿಲೈಸರ್ಸ್· ಅಂಡ್ ಕೆಮಿಕಲ್ಸ್ ಲಿ., ಹೈದರಾಬಾದ್.
23. ಮೆ: ನಾಥ್ ಸೀಡ್ಸ್, ದಾವಣಗೆರೆ.
24. ಮೆ: ನಿಂಬೇಕರ್ ಸೀಡ್ಸ್, ಪ್ರೈ. ಲಿ. ಫಲ್ಟಾನ್ ಮಹಾರಾಷ್ಟ್ರ.
25. ಮೆ: ನುಜುವೀಡಂ ಸೀಡ್ಸ್, ಪ್ರೈ. ಲಿ. ಗುಂಟೂರು.
25. ಮೆ: ನಂದಿ ಸೀಡ್ಸ್, ಪ್ರೈ. ಲಿ. ಮೆಹಬೂಬ್ ನಗರ.
26. ಮೆ: ಮಹಾರಾಷ್ಟ್ರ ಹೈಬ್ರಿಡ್ ಸೀಡ್ಸ್ ಪ್ರೈ. ಲಿ., ಬೆಂಗಳೂರು.
27. ಮೆ: ಪಾರಿ ಮನನಾಂಟೊ ಸೀಡ್ಸ್ ಪ್ರೈ. ಲಿ., ಬೆಂಗಳೂರು.
28. ಮೆ: ಪ್ರೋ ಆಗ್ರೋ ಸೀಡ್ಸ್, ಕಂ. ದಾವಣಗೆರೆ.
29. ಮೆ: ಪ್ರಭಾತ್ ಆಗ್ರೋ ಬಯೋ ಟೆಕ್ನಾಲಜಿ, ಪ್ರೈ. ಲಿ. ಹೈದರಾಬಾದ್.
30. ಮೆ: ರ್ಯಾಲೀಸ್ ಇಂಡಿಯಾ ಲಿ., ಬೆಂಗಳೂರು.
31. ಮೆ: ಸ್ವಿಕ್ ಬಯೋ ಟೆಕ್ನಾಲಜಿ, ಬೆಂಗಳೂರು.
32. ಮೆ: ನೀಡಂ ಕಾರನ್ ಡೆವಲಪ್‌ಮೆಂಟ್ ಅಂಡ್ ರಿಸರ್ಚ ಅಸೋಸಿಯೇಟ್, ಕೋಯಮತ್ತೂರು.
33. ಮೆ: ಸಾಗರ್ ಸೀಡ್ಸ್, ಬಾಗಲಕೋಟೆ.
34. ಮೆ: ಸೋಮನಾಥ್ ಸೀಡ್ಸ್, ಕಂ. ಗದಗ.
35. ಮೆ: ಶ್ರೀರಾಮ್ ಬಯೋಸೀಡ್ ಜೆನ್‌ಸೆಟ್ಸ್ ಇಂ. ಲಿ. ಹೈದರಾಬಾದ್.
36. ಮೆ: ಶ್ರೀ ವೆಂಕಟೇಶ್ವರ ಹೈಬ್ರಿಡ್ ಸೀಡ್ಸ್ ಕಂ. ಆಧೋನಿ.

37. ಮೆ: ವಿಕ್ಕೀನ್ ಆಗ್ರೋ-ಟೆಕ್, ಲಿ., ಹೈದರಾಬಾದ್.
38. ಮೆ: ವಿಜಯ ಸೀಡ್ಸ್ ಕಂಪನಿ, ಜಾಲ್ನಾ.
39. ಮೆ: ವಾಣಿ ಹೈಬ್ರಿಡ್ ಸೀಡ್ಸ್ ಕಂ. ಯೂರು
38. ಮೆ: ಜುವಾರಿ ಸೀಡ್ಸ್ ಲಿ. ಹೈದರಾಬಾದ್.

ಹುಲ್ಲುಗಾವಲು ಪ್ರದೇಶಗಳನ್ನು ಕಡಿಮೆ ಮಾಡುತ್ತಿರುವುದು.

1530(2156) ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಲ್ಲುಗಾವಲು ಕ್ಷೇತ್ರಗಳನ್ನು ಕಡಿಮೆ ಮಾಡದಂತೆ ಮಾನ್ಯ ನ್ಯಾಯಾಲಯ ಆದೇಶಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಈ ಮಾನ್ಯ ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿ ಗೋಮಾಳ ಝೀತ್ರ ಮಾಡಿದ ಪ್ರಕರಣಗಳ ಸಂಖ್ಯೆ ಎಷ್ಟು? ಅವು ಯಾವುವು?

ಇ) ನ್ಯಾಯಾಲಯದ ಆದೇಶ ಉಲ್ಲಂಘಿಸಿದವರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ) ಹೌದು

ಆ) ಅಂತಹ ಪ್ರಕರಣಗಳು ಯಾವುವೂ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಮಾನ್ಯ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ರಿಟ್ ಅಫೀಲ್ ಸಂಖ್ಯೆ: 5168 98 ಮತ್ತು 5169 : 98ರ ದಿನಾಂಕ: 18-1-1999ರಲ್ಲಿನ ಆದೇಶದಲ್ಲಿ ಕರ್ನಾಟಕ ಭೂಕಂದಾಯ ನಿಯಮಗಳು 1966ರ ನಿಯಮ 97(4) ರನ್ವಯ ಗೋಮಾಳದ ಜಮೀನುಗಳನ್ನು ಮಂಜೂರು ಮಾಡಬಹುದೆಂದು ಆದೇಶಿಸಿದೆ.

ಇ) ಉದ್ಭವಿಸುವುದಿಲ್ಲ.

ಆರಾಧನಾ ಯೋಜನೆಗೆ ಹಣ ಬಿಡುಗಡೆ.

1531(2150) ಶ್ರೀ ಉಜ್ಜೈನೇಶ್ವರ ಬಸವನಪ್ಪ ಬಣಕಾರ್ (ಹಿರೇಕೆರೂರ್) :— ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) 1998-99ನೇ ಸಾಲಿನಲ್ಲಿ ಆರಾಧನಾ ಯೋಜನೆಯಡಿ ಬಿಡುಗಡೆ ಮಾಡಿದ ಹಣ ಎಷ್ಟು ; (ತಾಲ್ಲೂಕುವಾರು ಮಾಹಿತಿ ಒದಗಿಸುವುದು)?

2) ಆ ಪೈಕಿ ಖರ್ಚು ಮಾಡಿದ ಹಣ ಎಷ್ಟು?